ಆಗುತ್ತಿದೆ. ಒಂದು ಟೀಮ್ ಅನ್ನು ಅಲ್ಲಿಗೆ ಕಳುಹಿಸಿ ಅದನ್ನು ನಾವು ಸ್ವಲ್ಪ study ಮಾಡಿ adopt ಮಾಡುವುದು better.

ಅಧ್ಯಕ್ಷರು : ಕೇರಳದ ಬಗ್ಗೆ ಮಾತನಾಡುತ್ತಾರೆ ನೋಡಿ,

ಶ್ರೀ ಎಸ್.ಆರ್.ಪಾಟೀಲ್ : ಮಾನ್ಯ ಸದಸ್ಯರಾದಂಥ ಲೋಬೋರ ವರ ವಿಚಾರಕ್ಕೆ ಅನುಗುಣವಾಗಿ ನಾವು ಕೇರಳದಲ್ಲಿ ಹೋಗಿ ಅಧ್ಯಯನ ಮಾಡಿಕೊಂಡು ನಮ್ಮಲ್ಲಿಯೂ ಏನಾದರೂ ವಿಶೇಷ ಹೆಚ್ಚಿನದಾಗಿದೆ. ನಮ್ಮಲ್ಲಿ ಏನಾಗಿದೆ ಎಂದರೆ Bangalore is the IT Capital of India, knowledge is Capital of India ಇಡೀ ವಿಶ್ವದಲ್ಲಿಯೇ ನಾವು ಇವತ್ತು ಬೆಂಗಳೂರು ಮೂಲಕ ಐಟಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದೇವೆ. ಬಹುತೇಕ we are not competing with the neighbouring States, we are only competing with the silicon value, that too in USA. ಬಹುತೇಕ ನಾವು ಕೇರಳಕ್ಕಿಂತ ಬಹಳಷ್ಟು ಮುಂದೆ ಇದ್ದೇವೆ. ಆ ದೃಷ್ಟಿಯಿಂದ ಅವರು Tier-2 towns ಸಲುವಾಗಿ ಹೇಳಿದ್ದಾರೆ. ಅಲ್ಲಿಗೆ ನಾವು ಟೀಮ್ ಕಳುಹಿಸಿ ಹಾಗೂ ಸ್ವತಃ ಹೋಗಿ Tier-2 towns develop ಮಾಡಲಿಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆ.

ಅಧ್ಯಕ್ಷರು : ಆಯಿತು. ಬಸವರಾಜ್ ಇಲ್ಲ, ಆರೋಗ್ಯ ಸಚಿವರದು ತೆಗೆದುಕೊಳ್ಳುತ್ತೇನೆ, ಬಿ. ಶಿವಣ್ಣನವರು ಪ್ರಶ್ನೆ ಕೇಳಿ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ

201; ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ (ಆನೇಕಲ್)

ಅ) ಆನೇಕಲ್ ತಾಲ್ಲೂಕು ಆಸ್ಪತ್ರೆ ಹಾಗೂ ಇತರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು);

ಇ) ಆನೇಕಲ್ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಅತ್ಯಾವಶ್ಯಕ ವೈದ್ಯ ಕೀಯ ಉಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕೊರತೆ ಇರುವ ವೈದ್ಯಕೀಯ ಉಪಕರಣಗಳ ಪೂರೈಕೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು);

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಅನುಬಂಧದಲ್ಲಿ ನೀಡಲಾಗಿದೆ.

ಇ) ಬಂದಿದೆ.

ಈ) ಪೂರೈಸಲಾಗುವುದು.

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಮತ್ತು ತಜ್ಞ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

- ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಆಯಾಯ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.
- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವ ಧನ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ,

ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ.80,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ.60,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

- ಕೆ.ಹೆಚ್.ಎಸ್.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಇತರೆ ತಜ್ಞತ್ತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ರೂ.65,000 ಹಾಗೂ ರೂ.50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ.5,000 ದಿಂದ ರೂ.10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ.8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೂ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.
- ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರ ಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
- ಇಲಾಖೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಲಾಗಿದೆ ಹಾಗೂ ಇಲಾಖೆಯಲ್ಲಿ ವಿವಿಧ ತಜ್ಞತ್ತೆ ಹೊಂದಿರುವ 983 ತಜ್ಞ ವೈದ್ಯರ ಹುದ್ದೆಗಳು, 331

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ 87 ದಂತ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರ ಬರೆಯಲು ಕ್ರಮವಹಿಸಲಾಗಿದೆ.

- ಭಾರತ ಸಂವಿಧಾನ ಅನುಚ್ಛೇದ 371 ಜೆ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಿಗೆ ಸಂಬಂಧಪಟ್ಟ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಇಚ್ಛೆ ಪತ್ರವನ್ನು ಪಡೆದು, ತದನಂತರ ಖಾಲಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಸ್ಥಳೀಯ ವೃಂದ ಮತ್ತು ಮೀಸಲಾತಿ ನಿಯಮಗಳನ್ವಯ ವರ್ಗೀಕರಿಸಿ, ತದನಂತರ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ದಂತ ಆರೋಗ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಹಲವು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಹಾಗೂ ಇತರೆ ಹುದ್ದೆಗಳನ್ನು ಇಲಾಖಾ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಮತ್ತು ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಬಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆನೇಕಲ್ ತಾಲ್ಲೂಕಿನಲ್ಲಿ ಇರುವ ಆಸ್ಪತ್ರೆಗಳಲ್ಲಿ ಸುಮಾರು 70 posts ಆಗಿವೆ. ಅದರಲ್ಲಿ ಕಾರ್ಯನಿರತ ಹುದ್ದೆ ಇರುವಂಥದ್ದು 33, ಖಾಲಿ ಇರತಕ್ಕಂಥದ್ದು 37, ಆದರೆ ಅರ್ಧಕ್ಕಿಂತ 51% ಹುದ್ದೆಗಳು ಖಾಲಿ ಇರುವುದರಿಂದ ಅಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಬರತಕ್ಕಂಥ ಬಡವರಿಗೆ ಎಲ್ಲಾ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಆದ್ದರಿಂದ ಏನು 37 ಹುದ್ದೆಗಳು ಖಾಲಿ ಇವೆ, ಅವುಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿ ಆನೇಕಲ್ ತಾಲ್ಲೂಕಿನಲ್ಲಿರುವಂಥ ಆಸ್ಪತ್ರೆಗಳಲ್ಲಿ ಅತ್ಯಾವಶ್ಯಕವಾಗಿರುವಂಥ ವೈದ್ಯಕೀಯ ಉಪಕರಣಗಳಕೊರತೆ ಸಹ ತುಂಬಾ

ಇವೆ. ಅವುಗಳನ್ನು ಸಹ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದ ಉದ್ದಲಗಕ್ಕೂ ವೈದ್ಯರ ಕೊರತೆಯಿರುವುದು ನಿಜ. ಆದರೆ, ಅನೇಕಲ್‌ಗೆ ಸಂಬಂಧಪಟ್ಟಂತೆ ಅವರು ಭಾಗ್ಯವಂತರು. ಏಕೆಂದರೆ, ಬಹುಶಃ ನಾನು ಮಾನ್ಯ ಶಿವಣ್ಣ ಶಾಸಕರ ಹತ್ತಿರ ನಾನು ಹೇಳುವುದಕ್ಕೆ ಇಚ್ಚಿಸುತ್ತೇನೆ. 9 ತಜ್ಞ ವೈದ್ಯರಲ್ಲಿ 8 ತಜ್ಞ ವೈದ್ಯರು ಕೆಲಸ ಮಾಡುತ್ತಿದ್ದಾರೆ. 13 ಎಂ.ಬಿ.ಬಿ.ಎಸ್. ಡಾಕ್ಟರ್‌ಗಳಲ್ಲಿ ಆ 13 ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು ಕೂಡ ಇದ್ದಾರೆ. 149 ರಲ್ಲಿ ಇನ್ನಿತರರಲ್ಲಿ 110 ಜನ ಕೆಲಸ ಮಾಡುವಂತಹದ್ದು. ಅದಕ್ಕಾಗಿ ಬಹುಶಃ ತಜ್ಞರ ಕೊರತೆ ಎಂದರೆ, ಬಹುಶಃ ಕಡಿಮೆಯಿರಬಹುದು. ಬೆಂಗಳೂರು ಹತ್ತಿರವಿರುವ ಕಾರಣ ಎಲ್ಲರೂ ಅಲ್ಲಿಗೆ ಬರುವುದಕ್ಕೆ ತಯಾರಾಗಿದ್ದಾರೆ. ಬಹುಶಃ ನಾವು ಇವತ್ತು ಕೌನ್ಸಿಲಿಂಗ್‌ನಲ್ಲಿ ಕೂಡ ಇನ್ನಿತರ ಪ್ರದೇಶದಲ್ಲಿ ಡಾಕ್ಟರ್ ಬರುವ ತನಕ ನಾವು ತೋರಿಸುವುದಕ್ಕೆ ಕೂಡ ಹೋಗುವುದಿಲ್ಲ. ರಾಜ್ಯದ ಎಲ್ಲಾ ಕಡೆ ಬಹುಶಃ ಬಗೆಹರಿಸುವ ತನಕ ಸ್ವಲ್ಪ ಸಹಕರಿಸಬೇಕೆಂದು ಕೇಳುವುದಕ್ಕೆ ಇಚ್ಚಿಸುತ್ತೇನೆ. ಅದರಲ್ಲಿ ತಾಲ್ಲೂಕು ಆಸ್ಪತ್ರೆಗೆ ಕೊಡುವಂತಹ ಎಲ್ಲಾ ಉಪಕರಣಗಳು ಯಾವುದು ಇದೆ, ಆ ಎಲ್ಲಾ 16 ಉಪಕರಣಗಳು ಯಾವುದು ಕೊಡುವಂತಹದ್ದು ಇದೆ, ಅದನ್ನು ಖಂಡಿತವಾಗಿ ಅದನ್ನು ಮುಟ್ಟಿಸುತ್ತೇವೆ.

ಶ್ರೀ ಬಿ.ಶಿವಣ್ಣ : ಮಾನ್ಯ ಆರೋಗ್ಯ ಸಚಿವರು ಕೂಡ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಆದರೆ, ಅವರು ಭೇಟಿ ಕೊಟ್ಟ ಮೇಲೆ ಅಲ್ಲಿರತಕ್ಕಂತಹ ನಾಗರೀಕರೆಲ್ಲರೂ ಕೂಡ ಇನ್ನೂ ಎಲ್ಲಾ ರೀತಿಯ ಸೌಕರ್ಯಗಳಾಗುತ್ತವೆ ಎಂದು ಈಗಾಗಲೇ ಅದು ಪೇಪರ್‌ಗಳಲ್ಲಿ ಮತ್ತು ಟಿ.ವಿ.ಗಳಲ್ಲಿಯೂ ಕೂಡ ಬಂದಿತ್ತು. ಆದರೆ, ಅವರು ಭೇಟಿ ಮಾಡಿದರೂ ಕೂಡ ಇನ್ನೂ ಏನೂ ಅನುಕೂಲಗಳಾಗಿಲ್ಲವಲ್ಲಾ ಎಂದು ನಾಗರೀಕರು - ತುಂಬಾ ಬೇಸರಪಟ್ಟುಕೊಂಡಿದ್ದಾರೆ. ದಯವಿಟ್ಟು ಈ ಒಂದು ಹಾಸ್ಪಿಟಲ್‌ಗೆ ಬೇಕಾಗಿರುವಂತಹ equipments.

ಡಾಕ್ಟರ್‌ಗಳು ಮತ್ತು ನರ್ಸ್‌ಗಳನ್ನು ಕೊಡಲೇ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳತ್ತೇನೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಈಗ critical ಮತ್ತು non-critical ಎಲ್ಲಿ 50% ಕಡಿಮೆಯಿದೆ, ಅದನ್ನು ಈಗ ನಾವು ಪ್ರಥಮ ಹಂತದಲ್ಲಿ ತೋರಿಸುತ್ತಿದ್ದೇವೆ. ಆದಕಾರ್ತಣ ಸ್ವಲ್ಪ ಈಗ ಈ ಒಂದು ಡಾಕ್ಟರ್ ಕೊರತೆಯಿದೆ, ಅಂದರೆ 9ರಲ್ಲಿ 8 ಇದ್ದು ಇನ್ನು ಮಿಕ್ಕ ಒಂದು ಡಾಕ್ಟರ್ ಮತ್ತೆ ಬರುವುದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಎಂದು ನಾನು ಇವತ್ತು ಹೇಳುವುದಕ್ಕೆ ಇಚ್ಚಿಸುತ್ತೇನೆ. ತಾಲ್ಲೂಕು ಆಸ್ಪತ್ರೆಯಲ್ಲಿ ಕೊಡುವಂತಹ ಯಾವು ದಾದರೂ computer ಕಡಿಮೆಯಿದ್ದರೆ ಅತೀ ಶೀಘ್ರದಲ್ಲಿಯೇ ಮುಟ್ಟಿಸುತ್ತೇನೆ.

ಔಷಧಿಗಳನ್ನು ಒದಗಿಸುವುದು

203(2018); ಶ್ರೀ ನರೇಂದ್ರಸ್ವಾಮಿ ಪಿ.ಎಂ (ಮಳವಳ್ಳಿ)

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಯಾವ ಯಾವ ಔಷಧಿಗಳನ್ನು ನೀಡಲಾಗುತ್ತದೆ; (ಹೆಸರು ಮತ್ತು ಕಂಪನಿ ಮಾಹಿತಿ ಒದಗಿಸುವುದು)

ಆ) ಆಸ್ಪತ್ರೆಗಳಿಗೆ ಈ ಔಷಧಗಳನ್ನು ಎಲ್ಲಿಂದ ನೀಡಲಾಗುವುದು; ಪ್ರಸ್ತುತ ಯಾವ ಯಾವ ಔಷಧಗಳು ಮೈಸೂರಿನ ಜಿಲ್ಲಾ ಔಷಧಾಲಯದಲ್ಲಿ ಲಭ್ಯವಿದೆ; ಇಲ್ಲಿಯವರೆಗೂ ಯಾವ ಯಾವ ಔಷಧಿಗಳನ್ನು ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ನೀಡಲಾಗಿದೆ; (ಕಳೆದ 2 ವರ್ಷದ ತಿಂಗಳು ವಾರು ಮಾಹಿತಿ ಓದಗಿಸುವುದು)

ಇ.) ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ಅವಶ್ಯಕತೆಯಿರುವ ಔಷಧಿಗಳನ್ನು ಸಕಾಲಕ್ಕೆ ಪೂರ್ಣ ಪ್ರಮಾಣದಲ್ಲಿ ಒದಗಿಸಲು ಆಗದೇ ಇರುವುದಕ್ಕೆ ಕಾರಣವೇನು;

ಈ.) ಈಬಗ್ಗೆ ಸರ್ಕಾರ ತಾಲ್ಲೂಕು ಮಟ್ಟದಲ್ಲೇ ಔಷಧಿಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದೇ?